# ತಿರುಗಿ ಮತ್ತೆ ಜನರ ನಡುವೆ ಸಮುದಾಯ

ರಂಗಭೂಮಿಯ ಮೂಲಕ ಮಹತ್ವದ ಬದಲಾವಣೆಯನ್ನು ತಂದ ತಂಡ 'ಸಮುದಾಯ'. ಈ ಸಾಂಸ್ಕೃತಿಕ ಸಂಘಟನೆಗೆ ಈಗ 50ರ ಸಂಭ್ರಮ. ಒಂದು ವರ್ಷ ಕಾಲ ಜರುಗುವ ಉತ್ಸವಕ್ಕೆ ಬೆಂಗಳೂರಿನಲ್ಲಿ ನಾಂದಿ ಹಾಡಲಾಯಿತು. ಎಲ್ಲರೂ ನೆನಪಿನ ಓಣಿಯಲ್ಲಿ ಮಿಂದೆದ್ದರು.

■ ಜಿ.ಎನ್. ಮೋಹನ್

ವೇದಿಕೆಯಿಂದ 'ಮೈಸೂರು ರಾಜ್ಯದ ದೊರೆಯೇ...' ಎಂದು ದನಿ ಹೊರಟಿದ್ದೇ ತಡ 'ರಣಧೀರ ನಾಯ್ಕ' ಎಂದು ಇಡೀ ಸಭಾಂಗಣಕ್ಕೆ ಸಭಾಂಗಣವೇ ಮರು ದನಿ ಹೊರಡಿಸಿತು. 'ನಿನ್ನಂತೋರು ಯಾರು ಇಲ್ವಲ್ಲೊ ಈ ಲೋಕದ ಮ್ಯಾಲೆ' ಎಂದು ಹಾಡು ಮುಂದುವರಿಯುವಷ್ಟರಲ್ಲಿ ಅದೆಲ್ಲಿದ್ದರೋ ಆ ತುಂಬು ಉತ್ಸಾಹಿಗಳು... ವೇದಿಕೆಯ ಮುಂದೆ ಜಿಗಿದವರೇ ಹಾಡನ್ನು ಕುಣಿತವಾಗಿ ಮಾರ್ಪಡಿಸಿದರು. ಆ ಕ್ಷಣ ಆ ಹಾಡು ಪ್ರತಿಯೊಬ್ಬರ ಹಾಡಾಗಿ ಬದಲಾಗಿತ್ತು. ಪ್ರತಿಯೊಬ್ಬರಿಗೂ ಆ ಹಾಡು ತಾವು ನಡೆದು ಬಂದ ರಂಗ ಹಾದಿಯನ್ನು ನೆನಪಿಸಿತ್ತು. ಹೋರಾಟದ ನೆನಪುಗಳನ್ನು ಮಾಡಿತ್ತು. ಮತ್ತೆ ಭರವಸೆ ತುಂಬಿದ ಹಾಡಾಗಿ ಬದಲಾಗಿತ್ತು.

ಇದೆಲ್ಲವೂ ಜರುಗಿದ್ದು ಬೆಂಗಳೂರಿನ ಸಂಸ ಬಯಲು ರಂಗಮಂದಿರದಲ್ಲಿ. 'ಸಮುದಾಯ' ರಂಗ ತಂಡ ತನ್ನ ಟೋಪ್ಪಿಗೆ 50 ವರ್ಷ ಎಂಬ ತುರಾಯಿಯನ್ನು ಸಿಕ್ಕಿಸಿಕೊಂಡ ಸಂದರ್ಭ ಅದು. ರಾಜ್ಯದ ಮೂಲೆ ಮೂಲೆಯಿಂದ ಬಂದ ನೂರಾರು ರಂಗಕರ್ಮಿಗಳ ಕಣ್ಣಲ್ಲಿ ಮಿಂಚಿತ್ತು. ತಾವು ವರ್ಷಗಳ ಕಾಲ ಕಂಡ ಸಹಯಾತ್ರಿಗಳನ್ನು ಆಲಂಗಿಸಿಕೊಳ್ಳುತ್ತಿದ್ದರು. ಬೀದರ್‌ನಲ್ಲಿ ಆಡಿದ ನಾಟಕ, ಬೆಂಗಳೂರಿನಲ್ಲಿ ಆದ ಮಾರಣಾಂತಿಕ ಹಲ್ಲೆ, ಮಂಗಳೂರಿನಲ್ಲಿ ದೋಣಿ ಹತ್ತಿ ಹೋಗಿ ನಾಟಕ ಮಾಡಿದ್ದು, ಚಿಕ್ಕಮಗಳೂರಿನಲ್ಲಿ ಧಿಕ್ಕಾರ ಕೂಗಿದ್ದು, ಹುಬ್ಬಳ್ಳಿಯಲ್ಲಿ ರಂಗ ವೇದಿಕೆಯಲ್ಲೇ ಜರುಗಿದ ಮದುವೆ, ಬಾಗಲಕೋಟೆಯಿಂದ ರಾತ್ರೋರಾತ್ರಿ ಬೆಂಗಳೂರು ಸೇರಿದ ಪುಟ್ಟ ಹುಡುಗ ಬೆಳಕು ವಿನ್ಯಾಸಕಾರನಾಗಿ ಬದಲಾದದ್ದು, ಕೊಡಗಿನಲ್ಲಿ ನಾಟಕ ಮಾಡುವಾಗ ಕಿಡಿಗೇಡಿಗಳು ಸಗಣಿ ಎರಚಿದ್ದು... ಹೀಗೆ ಅಲ್ಲಿ ನೆನಪುಗಳಿಗೆ ಬರವಿರಲಿಲ್ಲ. ಎಲ್ಲರೂ ಒತ್ತಿ ಹೇಳುತ್ತಿದ್ದದ್ದು ನಮ್ಮದು ಕೇವಲ ರಂಗ ತಂಡವಲ್ಲ, ಸಾಂಸ್ಕೃತಿಕ ಸಂಘಟನೆ ಎಂದೇ.

